ಸಾಲಿನಲ್ಲಿ ರೂ 100 ಲಕ್ಷಗಳ ಸಹಾಯ ಅನುದಾನವನ್ನು ಮಂಜೂರು ಮಾಡಲಾಗಿದೆ

434 **ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು)** ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲೂಕಿನಲ್ಲಿ ಮರಳು ಗುತ್ತಿಗೆಯಿಂದ ಅಂತರ್‌ಜಲ ನೀರಿನ ಮಟ್ಟವು ಅತೀ ಕಡಿಮೆಯಾಗಿ ಕುಡಿಯಲು ನೀರು ಇಲ್ಲದೇ ರೈತರು ಕಂಗಾಲಾಗಿ ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಸರ್ಕಾರವು ಮರಳು ಗುತ್ತಿಗೆಯನ್ನು ರದ್ದುಪಡಿಸಿ ಮುಂದಿನ ಬೇಸಿಗೆಯ ಸಮಯದಲ್ಲಿ ಅಂತರಜಲ ಮಟ್ಟವನ್ನು ಕಾಪಾಡಿ, ಈ ಭಾಗದ ಜನತೆಗೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಕೈಗೊಂಡಿರುವ ಕ್ರಮವೇನು,

ಇ) ಮರಳು ಗುತ್ತಿಗೆಯನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಇಲಾಖೆಯು ಆಯ್ದುಕೊಂಡಿರುವ ನಿರೀಕ್ಷಣಾ ಕೊಳವೆಬಾವಿಗಳಲ್ಲಿ ಅಂತರ್ಜಲ ಮಟ್ಟದ ಇಳಿಕೆ ಕಂಡುಬಂದಿದೆ ಕೋಲಾರ ಜಿಲ್ಲೆ ರಾಜ್ಯದ ಅತೀ ಕಡಿಮೆ ಮಳೆ ಬೀಳುವ ಪ್ರದೇಶದಲ್ಲೊಂದಾಗಿದೆ ಬೇಸಿಗೆಯಲ್ಲಿ ಅಂತರ್ಜಲ ಮಟ್ಟವು ಸಹಜವಾಗಿ ಕಡಿಮೆಯಾಗುತ್ತದೆ ಹೆಚ್ಚಿನ ಸಂಖ್ಯೆಯ ಕೊಳವೆ ಬಾವಿಗಳ ಉಪಯೋಗದಿಂದಲು ನೀರಿನಮಟ್ಟ ಕಡಿಮೆಯಾಗುತ್ತಿದೆ ಮರಳು ಗುತ್ತಿಗೆಯಿಂದ ಅಂತರ್ಜಲ ಮಟ್ಟ ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವ ಅವಕಾಶಗಳೂ ಇದೆ

ಆ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನಲ್ಲಿ ಮರಳು ಗಣಿಗಾರಿಕೆಗೆ ಯಾವುದೇ ಗುತ್ತಿಗೆಗಳನ್ನು ನೀಡಲಾಗುತ್ತಿಲ್ಲ

ಇ) ಈಗಾಗಲೇ ನೀಡಿರುವ ಮರಳು ಗುತ್ತಿಗೆಯನ್ನು ರದ್ದುಪಡಿಸಲು ಹಾಗೂ ಹೊಸ ಗುತ್ತಿಗೆ ನೀಡದಂತೆ, ಜಿಲ್ಲಾ ಮಟ್ಟದ ಉಸ್ತುವಾರಿ ಸಮಿತಿ ಕ್ರಮ ಕೈಗೊಂಡಿದೆ